# ಕೃಷಿ ವಿಶ್ವವಿದ್ಯಾಲಯ, ಧಾರವಾಡ
# ಐ.ಸಿ.ಎ.ಆರ್.-ಕೃಷಿ ವಿಜ್ಞಾನ ಕೇಂದ್ರ, ಧಾರವಾಡ

## ಮಾವಿನಲ್ಲಿ ಅಧಿಕ ಇಳುವರಿ ಮತ್ತು ಲಾಭಕ್ಕಾಗಿ
## "ಅರ್ಕಾ ಮಾವು ಸ್ಪೆಷಲ್ (Mango Special)"

ಮಾವಿನಲ್ಲಿ ಸಮಗ್ರ ಪೋಷಕಾಂಶಗಳ ನಿರ್ವಹಣೆಯಿಂದ ಅಧಿಕ ಇಳುವರಿ ಮತ್ತು ಗುಣಮಟ್ಟದ ಹಣ್ಣುಗಳನು ಪಡೆಯಬಹುದಾಗಿದೆ. ಲಘುಪೋಷಕಾಂಶಗಳಾದ ಕಬ್ಬಿಣ, ಸತು ಹಾಗೂ ಬೋರಾನ್ ಗಿಡಗಳ ಬೆಳವಣಿಗೆಗೆ ಹಾಗೂ ಇಳುವರಿಗೆ ಅತಿಸೂಕ್ತವಾದ ಏಳು ಲಘು ಪೋಷಕಾಂಶಗಳಲ್ಲಿ ಮುಖ್ಯವಾದವುಗಳಾಗಿವೆ. ಈ ಲಘು ಪೋಷಕಾಂಶಗಳು ವಿಶೇಷವಾಗಿ ಮಾವಿನ ಬೆಳೆಗೆ ಹೆಚ್ಚಿನ ಪ್ರಮಾಣದಲ್ಲಿ ಬೇಕಾಗುತ್ತವೆ. ಈ ಪೋಷಕಾಂಶಗಳು ಮಣ್ಣಿನಲ್ಲಿ ಸಾಕಷ್ಟು ಪ್ರಮಾಣದಲ್ಲಿ ಲಭ್ಯವಿದ್ದರೂ ಸಹ ಮಣ್ಣಿನ ರಸಸಾರ, ಮಣ್ಣಿನಲ್ಲಿರುವ ಸಾವಯವದ ಪ್ರಮಾಣ ಹಾಗೂ ಮಣ್ಣಿನಲ್ಲಿ ಉಂಟಾಗುವ ಪ್ರತಿರೋಧಕ ಕ್ರಿಯೆ ಮುಂತಾದ ಅನೇಕ ಕಾರಣಗಳಿಂದ ಸರಿಯಾದ ಪ್ರಮಾಣದಲ್ಲಿ ಹಾಗೂ ಸರಿಯಾದ ಸಮಯದಲ್ಲಿ ಗಿಡಗಳಿಗೆ ದೊರೆಯುವುದಿಲ್ಲ. ಈ ಕೊರತೆಗಳಿಂದ ಗಿಡಗಳು ಸೊರಗಿ ಇಲ್ಲವೇ ಒಣಗಿ ಹೋಗುತ್ತವೆ, ಹೂ ಕಾಯಿಗಳು ಉದುರುವುದು, ಮುಂತಾದವುಗಳಿಂದ ಹಣ್ಣಿನ ಗುಣಮಟ್ಟ ಕ್ಷೀಣಿಸುವುದಲ್ಲದೇ ಇಳುವರಿಯು ಕಡಿಮೆಯಾಗುತ್ತದೆ. ಇತರೆ ಲಘು ಪೋಷಕಾಂಶಗಳಾದ ತಾಮ್ರ, ಮ್ಯಾಂಗನೀಸ್, ಮೊಲಿಬ್ಡಿನಂ, ಕ್ಲೋರಿನ್‌ಗಳು ಸಹ ಮಾವಿನ ಗಿಡಗಳ ಉತ್ತಮ ಬೆಳವಣಿಗೆಗೆ ಹಾಗೂ ಅಧಿಕ ಇಳುವರಿಯನ್ನು ಪಡೆಯಲು ಅವಶ್ಯಕವಾಗಿವೆ. ಅದ್ದರಿಂದ ಮಾವಿನ ಲಾಭದಾಯಕ ಇಳುವರಿಯನ್ನು ಪಡೆಯಲು ಸರಿಯಾದ ಪ್ರಮಾಣದಲ್ಲಿ ಗಿಡಗಳಿಗೆ ಸೂಕ್ಷ್ಮ ಪೋಷಕಾಂಶಗಳನ್ನು ಒದಗಿಸುವುದು ಅತ್ಯವಶ್ಯಕವಾಗಿದೆ.

"ಮಾವು ಸ್ಪೇಷಲ್" ಸೂಕ್ಷ್ಮ ಪೋಷಕಾಂಶಗಳ ಮಿಶ್ರಣವನ್ನು ಮಾವಿನ ಎಲೆಗಳ ಮೇಲೆ ಸಿಂಪರಣೆ ಮಾಡಿ ಉತ್ತಮ ಗುಣಮಟ್ಟದ ಹಾಗೂ ಅಧಿಕ ಇಳುವರಿಯನ್ನು ಪಡೆದು ಹೆಚ್ಚಿನ ಲಾಭವನ್ನು ಪಡೆಯುವ ಉದ್ದೇಶದಿಂದ ಕಂಡುಹಿಡಿಯಲಾಗಿದೆ.

### ಮಾವು ಸ್ಪೆಷಲ್ ಬಳಸುವ ವಿಧಾನ:

ಪ್ಲಾಸ್ಟಿಕ್ ಬಕೇಟಿನಲ್ಲಿ 75 ಗ್ರಾಂ ಮಾವು ಸ್ಪೆಷಲ್ + 1 ನಿಂಬೆ ಹಣ್ಣಿನ ರಸ + 1 ಶ್ಯಾಂಪೂ ಸ್ಯಾಚೆಟ್ ಅನ್ನು 15 ಲೀ. ಶುದ್ಧ ನೀರಿನೊಂದಿಗೆ ಬೆರೆಸಿ ಮಿಶ್ರಣ ಮಾಡಿಕೊಂಡು ನಂತರ ಸಿಂಪಡಿಸಬೇಕು. ಮೊದಲನೇ ಸಿಂಪರಣೆ (ಸೆಪ್ಟೆಂಬರ್-ಅಕ್ಟೋಬರ್ ತಿಂಗಳಿನಲ್ಲಿ, ಎರಡನೇ ಸಿಂಪರಣೆ ನವೆಂಬರ್-ಡಿಸೆಂಬರ್‌ನಲ್ಲಿ, ಮೂರನೇ ಸಿಂಪರಣೆ ಜನವರಿಯಲ್ಲಿ (ಕಾಯಿ ಬಿಟ್ಟ ನಂತರ), ನಾಲ್ಕನೇ ಸಿಂಪರಣೆಯನ್ನು ಕಾಯಿ ಗೋಲಿ ಅಥವಾ ನಿಂಬೆ ಹಣ್ಣಿನ ಗಾತ್ರಕ್ಕೆ ಬೆಳೆದಾಗ ಮಾಡಬೇಕು. ಮಾವು ಸ್ಪೆಷಲ್ ಅನ್ನು ಮಾವಿನ ಗಿಡ ಹೂ ಬಿಡುವ ಸಮಯದಲ್ಲಿ ಉಪಯೋಗಿಸಬಾರದು. ಸಿಂಪರಣೆಗೆ ಬೆಳಿಗ್ಗೆ 6 ರಿಂದ 11 ಗಂಟೆ ಹಾಗು ಸಂಜೆ 4 ರಿಂದ 6.00 ರವರೆಗೆ ಸೂಕ್ತ ಸಮಯವಾಗಿರುತ್ತದೆ. ಸುಮಾರು 8 ಕೆ.ಜಿ. ಮಾವು ಸ್ಪೆಷಲ್ ಅನ್ನು ಒಂದು ಎಕರೆ ಮಾವು ಬೆಳೆಸುವ ಪ್ರದೇಶಕ್ಕೆ ಉಪಯೋಗಿಸಿ ಶೇಕಡಾ 15 ರಿಂದ 20 ರಷ್ಟು ಅಧಿಕ ಇಳುವರಿಯನ್ನು ಪಡೆಯಬಹುದು.

**ಮಾವು ಸ್ಪೆಷಲ್ ಸಿಂಪರಣೆಯ ಉಪಯೋಗಗಳು:**

1. ಸಿಂಪರಣೆಯಿಂದ ಕೊರತೆ ಪೋಷಕಾಂಶಗಳ ತ್ವರಿತ ನಿವಾರಣೆ ಮಾಡಬಹುದು.
2. ಕಡಿಮೆ ರಸಗೊಬ್ಬರಗಳ ಬಳಕೆ.
3. ಕಡಿಮೆ ಅವಧಿಯಲ್ಲಿ ಹಣ್ಣುಗಳು ಪಕ್ವವಾಗಿ ಕಟಾವಿಗೆ ಬರುತ್ತವೆ.
4. ಅಧಿಕ ಇಳುವರಿ ಹಾಗೂ ಉತ್ತಮ ಗುಣಮಟ್ಟದ ಹಣ್ಣುಗಳನ್ನು ಪಡೆಯಬಹುದು.

ಕೃಷಿ ವಿಜ್ಞಾನ ಕೇಂದ್ರ ಧಾರವಾಡದಲ್ಲಿ "ಮಾವು ಸ್ಪೆಷಲ್" ಉತ್ಪಾದನೆ ಮಾಡುತ್ತಿದು ಪ್ರತಿ ಕೆ.ಜಿಗೆ 150 ರೂ ಬೆಲೆ ನಿಗದಿ ಪಡಿಸಲಾಗಿದೆ. 2 ಕೆ.ಜಿ ಪ್ಯಾಕೆಟಗಳನ್ನು ಒಳಗೊಂಡ ಮಾವು ಸ್ಪೆಷಲ್ ಮಿಶ್ರಣ ಕೃಷಿ ವಿಜ್ಞಾನ ಕೇಂದ್ರ ಧಾರವಾಡದಲ್ಲಿ ಲಭ್ಯವಿದೆ ರೈತ ಭಾಂದವರು ಇದರ ಪ್ರಯೋಜನ್ ಪಡೆದು ಮಾವಿನಲ್ಲಿ ಅಧಿಕ ಇಳುವರಿ ಪಡೆಯಲು ವಿನಂತಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಕೃಷಿ ವಿಜ್ಞಾನ ಕೇಂದ್ರ ಧಾರವಾಡದ ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥರು ಅಥವಾ ಹಿರಿಯ ತಾಂತ್ರಿಕ ಅಧಿಕಾರಿ (ಮಣ್ಣು ವಿಜ್ಞಾನ), ಐ.ಸಿ.ಎ.ಆರ್.–ಕೃಷಿ ವಿಜ್ಞಾನ ಕೇಂದ್ರ, ಧಾರವಾಡ ಇವರನ್ನು ಸಂಪರ್ಕಿಸಬಹುದು.


| | | |
|---|---|---|
| ದೂರವಾಣಿ ಸಂಖ್ಯೆ | : | **0836–2970246** |
| ಮಿಂಚಂಚೆ | : | kvkdwd@uasd.in, kvk.Dharwad@icar.gov.in |
| ವೆಬ್‌ಸೈಟ್ | : | kvkdharwad.org |